ಕ್ಕಾಗಿ ೧೫೮೨ ರಿಂದ ಗ್ರಿಗೋರಿಯನ್ ಕ್ಯಾಲೆಂಡರ್ ಆಚರಣೆಗೆ ಬಂತು. ಗ್ರಿಗೋರಿಯನ್ ಕ್ಯಾಲೆಂಡರ್ ಪ್ರಕಾರ ಜನವರಿ ೧ ರಂದು ವರ್ಷದ ಆರಂಭ. ರೋಮನ್ ಕ್ಯಾಥೊಲಿಕ್ ರಾಷ್ಟ್ರಗಳೆಲ್ಲವೂ ಅದನ್ನೇ ವರ್ಷಾರಂಭವೆಂದು ಸ್ವೀಕಾರ ಮಾಡಿದುದರ ಫಲವಾಗಿ ಪ್ರಪಂಚದ ಬಹುತೇಕ ರಾಷ್ಟ್ರಗಳಲ್ಲಿ ಜನವರಿ ೧ರಂದು ಹೊಸವರ್ಷ ಆಚರಣೆಯಲ್ಲಿದೆ.

ಹಿಂದೂಗಳ ವರ್ಷಾರಂಭವಾದ ಯುಗಾದಿಯ ಸಮಯದಲ್ಲಿ ಇಡೀ ಪ್ರಕೃತಿಯೇ ಹೊಸತನದಿಂದ ಕಂಗೊಳಿಸುತ್ತದೆ. ಚೈತ್ರ ಪಾಡ್ಯದ ಸಮಯದಲ್ಲಿ ಸೂರ್ಯನು ವಸಂತ ಸಂಪಾತದ ಮೇಲೆ ಬರುತ್ತಾನೆ (ಸಂಪಾತ ಬಿಂದು ಅಂದರೆ ಮಕರ ಮತ್ತು ಕರ್ಕಾಟಕ ವೃತ್ತಗಳು ಪರಸ್ಪರ ಛೇದಿಸುವಂತಹ ಬಿಂದು). ಹೀಗೆ ವಸಂತ ಋತು ಪ್ರಾರಂಭವಾಗುತ್ತದೆ. **ಋತೂನಾಂ ಕುಸುಮಾಕರಃ** – "ಋತುಗಳ ಮಧ್ಯೆ ಕುಸುಮಾಕರವಾದ ವಸಂತ ಋತುವು ನನ್ನ ವಿಶೇಷ ಶಕ್ತಿಯಾಗಿದೆ" ಎಂದು ಭಗವಂತನು ಶ್ರೀಮದ್ಭಗವದ್ಗೀತೆಯಲ್ಲಿ ಹೇಳಿದ್ದಾನೆ. ಈ ಸಮಯದಲ್ಲಿ ಸಮಶೀತೋಷ್ಣವಾದ ಆಹ್ಲಾದದಾಯಕ ಹವಾಗುಣವಿರುತ್ತದೆ; ಇಡೀ ಪ್ರಕೃತಿಯಲ್ಲಿ ಲವಲವಿಕೆ, ಜೀವಂತಿಕೆ ಇರುತ್ತದೆ. ಶಿಶಿರ ಋತುವಿನಲ್ಲಿ ಮರಗಳ ಎಲೆಗಳು ಉದುರಿದರೆ, ಯುಗಾದಿಯ ಹೊತ್ತಿಗೆ ಹೊಸ ಚಿಗುರು ಬರುವುದರಿಂದ ಮರ-ಬಳ್ಳಿಗಳು ಚೈತನ್ಯಮಯವಾಗಿ ಕಾಣುತ್ತವೆ. ಎಲ್ಲಾ ಮರಗಳು, ಬಳ್ಳಿಗಳು ಹೂ ಬಿಡುತ್ತವೆ, ಫಲ ಬಿಡುತ್ತವೆ. ಹೀಗೆ ಯುಗಾದಿಯ ಹಬ್ಬವು ಇಡೀ ಪ್ರಕೃತಿಯೇ ಹೊಸ ವರ್ಷವನ್ನು ಆಚರಿಸುವ ಸಂದರ್ಭವಾಗಿದೆ.

ಯುಗಾದಿ ಎಂದ ಕೂಡಲೆ ನಮ್ಮ ನೆನಪಿಗೆ ಬರುವುದು ಬೇವು-ಬೆಲ್ಲ. ಬೇವಿನ ಚಿಗುರಿನ ಕಹಿ, ಬೆಲ್ಲದ ಸಿಹಿ-ಇವೆರಡೂ ಬದುಕಿನ ಪ್ರತೀಕ; ನೋವು-ನಲಿವುಗಳ ಸಂಕೇತ; ಅದೃಷ್ಟ-ದುರದೃಷ್ಟಗಳ ಪ್ರತಿಬಿಂಬ. ಬೇವು ನಾಲಗೆಗೆ ಕಹಿಯಾದರೂ ಉದರಕ್ಕೆ ಸಿಹಿಯೇ ಆಗಿದೆ. ಕಹಿಯನ್ನು ನುಂಗಿ ಸಿಹಿಯಾಗಿ ಆಲೋಚನೆ ಮಾಡಬೇಕೆಂಬ ಗೂಢಾರ್ಥವನ್ನು ಬೇವು-ಬೆಲ್ಲ ನೀಡುತ್ತದೆ. ಸಿಹಿ-ಕಹಿಗಳೆರಡನ್ನೂ ಯುಕ್ತ ಪ್ರಮಾಣದಲ್ಲಿ ಸೇವಿಸುವುದು ಆರೋಗ್ಯಕರ. ಇದನ್ನೇ ಕವಿ ಚನ್ನವೀರ ಕಣವಿಯವರು **"ಜೀವನದಲ್ಲಿ ಬೇವುಬೆಲ್ಲ; ಎರಡೂ ಸವಿವನೆ ಕವಿಮಲ್ಲ"** ಎಂದಿದ್ದಾರೆ.

ಆಯುರ್ವೇದದ ಪ್ರಕಾರ ವಸಂತಕಾಲದಲ್ಲಿ ತಲೆದೋರುವ ಶಾರೀರಿಕ ರೋಗ-ರುಜಿನಗಳಿಗೆ ಬೇವು ಒಳ್ಳೆಯ ಔಷಧ. ಏಕೆಂದರೆ ಬೇವು ಕ್ರಿಮಿನಾಶಕ; ಉಷ್ಣತೆಯನ್ನು ತಗ್ಗಿಸಿ ಮೈಗೆ ತಂಪು ಒದಗಿಸುವ ಶಕ್ತಿಯೂ ಅದಕ್ಕಿದೆ. ಇದರ ಜೊತೆಗೆ ಸ್ವಲ್ಪ ಉಷ್ಣಗುಣದ ಬೆಲ್ಲವೂ ಸೇರಿದರೆ ದೇಹದಲ್ಲಿ ಸಮತೋಲನ ಸಾಧಿಸಲು ಸಾಧ್ಯ. **ಶತಾಯುರ್ವಜ್ರದೇಹಾಯ ಸರ್ವಸಂಪತ್ಕರಾಯ ಚ । ಸರ್ವಾರಿಷ್ಟವಿನಾಶಾಯ ನಿಂಬ ಕದಳಭಕ್ಷಣಮ್॥** – ಶತಾಯುವಾಗಿ, ವಜ್ರಕಾಯವನ್ನು ಹೊಂದಿ, ಸರ್ವಸಂಪತ್ತನ್ನೂ ಪಡೆದುಕೊಂಡು, ಸರ್ವಾರಿಷ್ಟಗಳನ್ನೂ ನಾಶಪಡಿಸಿಕೊಂಡು, ಸುಖವಾಗಿರುವುದಕ್ಕಾಗಿ ಬೇವಿನ ಚಿಗುರೆಲೆಗಳನ್ನು ಸೇವಿಸಬೇಕೆಂದು ಶಾಸ್ತ್ರ ಹೇಳುತ್ತದೆ.

ಇಂತಹ ವೈಜ್ಞಾನಿಕವಾದ, ಅರ್ಥಪೂರ್ಣವಾದ ಯುಗಾದಿ ಹಬ್ಬವನ್ನು ಹೊಸ ವರ್ಷ ಎಂಬುದಾಗಿ ಆಚರಿಸುವ ಬದಲು ನಾವು ಪಾಶ್ಚಾತ್ಯರ ಅನುಕರಣೆಯಿಂದ ಜನವರಿ ೧ ನೇ ತಾರೀಖನ್ನು ಹೊಸ ವರ್ಷವಾಗಿ ಆಚರಿಸುತ್ತೇವೆ. ಅದನ್ನಾದರೂ ನಮ್ಮ ಯುವಕರು ಹೇಗೆ ಆಚರಿಸುತ್ತಾರೆ? ಹಿಂದಿನ ರಾತ್ರಿ ತಿಂದು, ತೇಗಿ, ಕುಡಿದು, ಕುಪ್ಪಳಿಸಿ ರಸ್ತೆಯಲ್ಲೆಲ್ಲಾ ಪುಂಡಾಟವಾಡುತ್ತಾರೆ. ವಾಹನಗಳನ್ನು ವಿಪರೀತವಾಗಿ ಓಡಿಸಿ, ಅಪಘಾತಗಳಿಗೆ ಕಾರಣರಾಗುತ್ತಾರೆ. ಡಿಸೆಂಬರ್ ೩೧ರ ರಾತ್ರಿ ಅತಿ ಹೆಚ್ಚು ಅಪಘಾತ ಆಗುತ್ತದೆ ಎಂಬುದಾಗಿ ಪೋಲೀಸ್ ಇಲಾಖೆಯ ಅಂಕಿ-ಅಂಶ ಹೇಳುತ್ತದೆ. ಹೀಗೆ ಇವತ್ತು ನಾವು ನಮ್ಮದೆಲ್ಲವನ್ನೂ ಮರೆತು ಪಾಶ್ಚಾತ್ಯರ ಅಂಧಾನುಕರಣೆ ಮಾಡುತ್ತ ಅಧೋಗತಿಗಿಳಿಯುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ನಮ್ಮ ಹಬ್ಬಗಳ ಒಳಮರ್ಮವನ್ನು ಸರಿಯಾಗಿ ತಿಳಿದುಕೊಳ್ಳೋಣ. ಅದರಲ್ಲಡಗಿರುವ ಆಧ್ಯಾತ್ಮಿಕ, ವೈಚಾರಿಕ ಮತ್ತು ವೈಜ್ಞಾನಿಕ ತತ್ತ್ವಗಳನ್ನು, ಸತ್ಯಗಳನ್ನು ಕಂಡುಕೊಳ್ಳೋಣ. ನಮ್ಮತನವನ್ನು ಬಿಡದೆ, ಪರಕೀಯರ ಅಂಧಾನುಕರಣೆ ಮಾಡದೆ ನಮ್ಮ ಹಬ್ಬಗಳ ಆಚರಣೆಗಳನ್ನು ಅರ್ಥವತ್ತನ್ನಾಗಿಸಿ ನಮ್ಮ ಜೀವನವನ್ನು ಸಾರ್ಥಕಗೊಳಿಸೋಣ. ❑

**ಭಕ್ತ : "ನಾವು ಪ್ರಾರ್ಥನೆ ಮಾಡಿದರೆ, ಭಗವಂತ ಕಿವಿಗೊಡುವನೇನು?"**

**ಶ್ರೀರಾಮಕೃಷ್ಣರು: "ಭಗವಂತ ಕಲ್ಪತರು. ಬೇಡಿದ್ದೆಲ್ಲಾ ದೊರೆತುಬಿಡುತ್ತದೆ. ಆದರೆ ಕಲ್ಪತರುವಿನ ಕೆಳಗೆ ನಿಂತು ಪ್ರಾರ್ಥನೆ ಮಾಡಬೇಕು. ಆಗ ಮಾತ್ರವೇ ಪ್ರಾರ್ಥನೆ ಸಫಲಗೊಳ್ಳುತ್ತದೆ. ಆದರೆ ಒಂದು ವಿಷಯ. ಭಗವಂತ ಭಾವಗ್ರಾಹಿ. ಏನೇನನ್ನು ಭಾವಿಸಿ ಸಾಧನೆ ಮಾಡುತ್ತಾರೊ, ಅವರಿಗೆ ಅದರಂತೇ ಫಲ ದೊರೆಯುತ್ತದೆ. ಮನಸ್ಸಿನಂತೆ ಮಹಾದೇವ."**

# ದೀಪಾವಳಿಯ ಸೊಬಗು

ಹಬ್ಬವೋ ಹಬ್ಬ

ಸಿ.ಎಸ್. ಮಂಗಳಮ್ಮ



**ದಸರಾ ಹಬ್ಬದ ಬೆನ್ನಲ್ಲೇ ಬರುವುದು ದೀಪಾವಳಿ ಹಬ್ಬ. ಈ ಹಬ್ಬದ ವೈಶಿಷ್ಟ್ಯವನ್ನು ಕೌಟುಂಬಿಕ ಹಾಗೂ ಧಾರ್ಮಿಕ ದೃಷ್ಟಿಕೋನಗಳಲ್ಲಿ ಸೊಗಸಾಗಿ, ನವಿರಾಗಿ ವಿಶ್ಲೇಷಣೆ ಮಾಡಿರುವ ಲೇಖಕಿ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು. ಇವರು ಹಲವು ಪುಸ್ತಕಗಳನ್ನು ಬರೆದಿದ್ದಾರೆ. ಇವರ ಲೇಖನಗಳು 'ವಿವೇಕಪ್ರಭ' ದಲ್ಲಿ ನಿಯಮಿತವಾಗಿ ಪ್ರಕಟವಾಗುತ್ತಿವೆ.**

**ಭಾ**ರತದಲ್ಲಿ ಹಿಂದೂಗಳಿಗೆ ವರ್ಷಪೂರ್ತಿ ಯಾವುದಾದರೊಂದು ಹಬ್ಬ–ಹರಿದಿನ ಇದ್ದೇ ಇರುತ್ತದೆ. ನಿತ್ಯವೂ ಭಗವಂತನ ಹೆಸರಿನಲ್ಲಿ ಪೂಜೆ, ಪ್ರಸಾದ! ನಮ್ಮ ಹಿರಿಯರು ಮಾಡಿರುವ ಕಟ್ಟು–ಕಟ್ಟಳೆಗಳು, ಹಬ್ಬಗಳು ಋತುಧರ್ಮಕ್ಕನುಗುಣವಾಗಿದ್ದು ದೇಹಾರೋಗ್ಯಕ್ಕೂ ಹೊಂದುವಂತಹವು. ಹಬ್ಬಗಳಲ್ಲಿ ಮಾಡುವ ಅಡುಗೆ, ಭಕ್ಷ್ಯಗಳೂ ಸಹ ಒಂದು ಕಟ್ಟುನಿಟ್ಟಿನೊಳಗೇ ಇರುತ್ತವೆ. ಹಬ್ಬಗಳಲ್ಲಿ ವೈವಿಧ್ಯಗಳಿವೆ. ಯುಗಾದಿ ಸಾರ್ವತ್ರಿಕವಾದದ್ದು. ವರ್ಷದ ಆದಿಯಲ್ಲಿ ಸಿಹಿ–ಕಹಿ ಮಿಶ್ರಣದ ಬದುಕಿನ ಸಾಂಕೇತಿಕ ರೂಪವನ್ನು ಅದು ಸೂಚಿಸುತ್ತದೆ. ದೀಪಾವಳಿ ಬೆಳಕಿನ ಹಬ್ಬ. **'ತಮಸೋ ಮಾ ಜ್ಯೋತಿರ್ಗಮಯ'** – ಅಂದರೆ ಕತ್ತಲೆಯಿಂದ ಬೆಳಕಿನ ಕಡೆಗೆ ಹೋಗುವುದನ್ನು ಇದು ಸೂಚಿಸುತ್ತದೆ. ಇವುಗಳ ಮಧ್ಯೆ ರಾಮನವಮಿ, ಕೃಷ್ಣಜನ್ಮಾಷ್ಟಮಿ, ನಾಗಪಂಚಮಿ, ಗೌರಿಗಣೇಶ –ಹೀಗೆ ಹಲವು ಹದಿನಾರು ದೇವದೇವಿಯರ (ಅವರವರ ಸಂಪ್ರದಾಯದಂತೆ) ಪೂಜೆಗಳು ಆಚರಣೆಯಲ್ಲಿವೆ. ಹುಣ್ಣಿಮೆ, ಅಮಾವಾಸ್ಯೆ, ಸಂಕ್ರಮಣ ಇತ್ಯಾದಿ ಪರ್ವದಿನಗಳಲ್ಲಿ ಕೂಡ ಹಬ್ಬ ಆಚರಿಸುತ್ತೇವೆ. **ಈ ರೀತಿ ಒಂದಲ್ಲ ಒಂದು ಬಗೆಯಲ್ಲಿ ಜೀವನದ ಜಂಜಾಟಗಳ ಮಧ್ಯೆ ಮನಸ್ಸಿಗೆ ಉಲ್ಲಾಸ, ಉತ್ಸಾಹ, ಸಂತೋಷಗಳನ್ನು ತಂದುಕೊಳ್ಳುವುದಕ್ಕಾಗಿ ಹಿರಿಯರು ಮಾಡಿರುವ ಸಂಪ್ರದಾಯಗಳೇ ಹಬ್ಬವೆನಿಸಿಕೊಂಡು, ಬದುಕಿಗೆ ಅವಶ್ಯಕವೆನಿಸುತ್ತವೆ.** ಇಲ್ಲಿ ಆಡಂಬರಕ್ಕೆ ಎಡೆ ಇಲ್ಲ. ತತ್ತ್ವಕ್ಕೆ, ಸರಳತನಕ್ಕೆ, ಶ್ರದ್ಧೆಗೆ, ಭಕ್ತಿಗೆ, ಸತ್ಸಂಗಕ್ಕೆ, ಅತಿಥಿ ಸತ್ಕಾರಕ್ಕೆ, ಗುರುಹಿರಿಯರ ಸೇವೆಗೆ ಇಲ್ಲಿ ಅವಕಾಶವಿರುತ್ತದೆ. ಚಿಕ್ಕಮಕ್ಕಳಿಂದ ಹಿಡಿದು ವೃದ್ಧರವರೆಗೆ ಒಂದೊಂದು ಹಬ್ಬದಲ್ಲಿ ವಿಶೇಷ ಸ್ಥಾನಮಾನ, ಗೌರವ. ತನ್ಮೂಲಕ ಕುಟುಂಬದ ಸದಸ್ಯರೆಲ್ಲರಿಗೂ ಸಾಂತ್ವನ, ಸಮಾಧಾನ!

ಭಾರತೀಯ ಹಬ್ಬಗಳ ಹಿನ್ನೆಲೆಯಲ್ಲಿ ದಾನ, ತ್ಯಾಗ, ಸೇವೆಗಳ ವಿಶೇಷತೆಯನ್ನು ಕಾಣುತ್ತೇವೆ. ಗುಪ್ತದಾನಕ್ಕೆ ಇಲ್ಲಿ ಮಹತ್ವ. ಇಲ್ಲಿನದು ಹಂಚಿ ಹರ್ಷಪಡುವ ರೀತಿ. ರಾಮನವಮಿಯಲ್ಲಿ ಪಾನಕ ಕೋಸಂಬರಿಗಳ ಜೊತೆಗೆ ಬೀಸಣಿಕೆ ಇತ್ಯಾದಿ ಬೇಗೆಯನ್ನು ತಣಿಸುವ ಸಾಧನಗಳ ದಾನ, ಕೃಷ್ಣಾಷ್ಟಮಿಯಲ್ಲಿ ಮಕ್ಕಳಿಗೆ ಪ್ರಿಯವಾದ ತಿಂಡಿಗಳ ಸಮಾರಾಧನೆ, ಗೌರಿಯ ಹಬ್ಬದಲ್ಲಿ ಗುಪ್ತ ದಾನದ ಸಂಕೇತ ಮೊರದ ಬಾಗಿನ, ಗಣೇಶೋತ್ಸವದಲ್ಲಿ ಸಭೆ, ಸಮಾರಂಭ, ನೃತ್ಯ, ಗಾಯನಗಳು, ಪ್ರಸಾದ ವಿನಿಯೋಗ –

ಹೀಗೆ ಹಬ್ಬಗಳು ಕೇವಲ ಊಟ, ತಿಂಡಿ, ಉಡುಗೊರೆಗಳಿಗಷ್ಟೇ ಮೀಸಲಾಗಿಲ್ಲ, 'ಜನತಾಜನಾರ್ದನನ ಸೇವೆ' ಕೂಡ ನಾನಾ ರೂಪದಲ್ಲಿ ನಡೆಯುತ್ತದೆ. ಇತ್ತೀಚೆಗೆ ಮೂಲತತ್ತ್ವಕ್ಕಿಂತ ಆಡಂಬರವೇ ಹೆಚ್ಚಾಗಿಬಿಟ್ಟಿದೆ. ರೀತಿಯಲ್ಲಿ ಕೂಡ ನಾನಾ ಬದಲಾವಣೆಗಳಾಗಿವೆ. ಆದರೂ ಹಬ್ಬ ಮಾಡುವುದನ್ನೇನೂ ಪೂರ್ತಿಯಾಗಿ ನಾವು ಬಿಟ್ಟಿಲ್ಲ. ಕಾಲಕ್ಕೆ ತಕ್ಕಂತೆ ಸಂಸ್ಕೃತಿ ಪರಿವರ್ತನೆಯಾಗುವುದು ಸರಿಯಷ್ಟೇ!

## ದೀಪಾವಳಿಯ ಸೊಬಗು

ಹಬ್ಬಗಳ ಸಾಲಿನಲ್ಲಿ ಕೆಲವು ದೊಡ್ಡ ಹಬ್ಬಗಳು, ಅಂದರೆ ಎಲ್ಲರೂ ಆಚರಿಸತಕ್ಕವು. ಉದಾಹರಣೆಗೆ ಯುಗಾದಿ, ಸಂಕ್ರಾಂತಿ, ದೀಪಾವಳಿ ಮುಂತಾದವು. ಯುಗಾದಿ ವರ್ಷಾರಂಭದ ಹಬ್ಬ. ಎಲ್ಲರ ಮನೆಯಲ್ಲಿಯೂ ದೇವತಾರ್ಚನೆ. ಸಂಕ್ರಾಂತಿಯಲ್ಲಿ ದನ, ಧಾನ್ಯಗಳಿಗೂ, ಕೃಷಿಗೆ ಸಂಬಂಧಪಟ್ಟವುಗಳಿಗೂ ಪೂಜೆ; ಇದು ಸುಗ್ಗಿ ಹಬ್ಬ. ದೀಪಾವಳಿ ಹೆಸರೇ ಸೂಚಿಸುವಂತೆ ದೀಪಗಳ ಅಥವಾ ಬೆಳಕಿನ ಹಬ್ಬ. ಹಬ್ಬಗಳ ಸಾಲಿನಲ್ಲಿ ಇದು ಕೊನೆಯ ಹಬ್ಬ. ಈ ಎಲ್ಲ ಹಬ್ಬಗಳಲ್ಲೂ ದೇವಸ್ಥಾನಗಳಿಗೆ ಹೋಗಿ ಭಗವಂತನ ದರ್ಶನ ಪಡೆದು, ಆಶೀರ್ವಾದ ಬೇಡುವುದು ಸರ್ವೇಸಾಮಾನ್ಯ. ಈ ಹಬ್ಬಗಳಲ್ಲಿ ಯಾವುದೇ ನಿರ್ದಿಷ್ಟ ದೇವ–ದೇವಿಯರ ಪೂಜೆ ಇಲ್ಲ. ದೀಪಾವಳಿ ಭಾವನಾತ್ಮಕವಾದದ್ದು. ಮನಸ್ಸಿನ ಅಜ್ಞಾನವೆಂಬ ಕತ್ತಲೆಯನ್ನು ಜ್ಞಾನಜ್ಯೋತಿಯಿಂದ ಮಾತ್ರ ಕಳೆಯಬಹುದೆಂಬುದನ್ನು ಸೂಚಿಸುವ ಹಬ್ಬ ಇದು. ದುಷ್ಟ ಸ್ವಭಾವದ ನಿಗ್ರಹ, ಅದರಿಂದ ಮನಸ್ಸಿಗೆ ಸಂತೋಷದ ಸಿರಿ, ತ್ಯಾಗದಿಂದ ಉಂಟಾಗುವ ಶಾಶ್ವತ ಆನಂದ – ಈ ಮೌಲ್ಯಗಳನ್ನು ದೀಪಾವಳಿ ಎತ್ತಿಹಿಡಿಯುತ್ತದೆ. ಅದಲ್ಲದೆ ಭಾರತದಲ್ಲಿ ಯಾವುದೇ ಶುಭಸಮಾರಂಭಗಳನ್ನು ದೀಪ ಬೆಳಗುವುದರ ಮೂಲಕವೇ ಆರಂಭಿಸುವುದು ಎಲ್ಲಾ ಕಡೆ ರೂಢಿಯಲ್ಲಿದೆ.

## ದೀಪಾವಳಿ ಐತಿಹ್ಯ

ರಾಮಾಯಣದಲ್ಲಿ ಶ್ರೀರಾಮಚಂದ್ರ ಹದಿನಾಲ್ಕು ವರ್ಷ ವನವಾಸಿಯಾಗಿದ್ದು, ರಾಕ್ಷಸರನ್ನು ಸಂಹರಿಸಿ, ಅಯೋಧ್ಯಾ ನಗರಿಯ ರಾಜ್ಯಲಕ್ಷ್ಮಿಯಂತಿದ್ದ ಸೀತಾದೇವಿಯನ್ನು ಸಂಕಟಗಳ ಕತ್ತಲೆಯಿಂದ ಪಾರುಮಾಡಿ, ಅಯೋಧ್ಯಾನಗರಿಯ ಜನರ ದುಃಖ–ದುಮ್ಮಾನಗಳನ್ನು ದೂರಮಾಡುವ ಸೂರ್ಯನಂತೆ ಅಯೋಧ್ಯೆಗೆ ಹಿಂತಿರುಗಿದ ದಿನ ದೀಪಾವಳಿ !

ಇತಿಹಾಸದ ಪುಟಗಳನ್ನು ತಿರುವಿದರೆ ಕ್ರಿ.ಪೂ. ೨೭೦–೨೩೨ರ ಕಾಲಘಟ್ಟ ಅಶೋಕ ಚಕ್ರವರ್ತಿಯ ರಾಜ್ಯಾಡಳಿತದ ದಿನಗಳು. ಅವನು ಕಳಿಂಗ ದೇಶದ ಮೇಲೆ ಯುದ್ಧ ಮಾಡಿ ಗೆಲುವನ್ನು ಸಾಧಿಸಿದ. ಆದರೆ ಆ ಗೆಲುವಿನ ಹಿಂದೆ ಅಸಂಖ್ಯಾತ ಜೀವಿಗಳ ನೋವನ್ನೂ, ಸಾವನ್ನೂ ಕಂಡ ಆತನ ಮನಸ್ಸು ಮಂಕಾಯಿತು. ಇದರಿಂದ ಮತ್ತೆ ಬೆಳಕಿನಡೆಗೆ ಬರಲು ಅಹಿಂಸಾ ತತ್ತ್ವವನ್ನಾಧರಿಸಿದ ಬೌದ್ಧ ಮತಕ್ಕೆ ಅಶೋಕನು ಶರಣಾದನು. ಆ ಪರಿವರ್ತನೆಯ ದಿನ ದೀಪಾವಳಿ! ಅಜ್ಞಾನದ ಅಂಧಕಾರದಿಂದ ಅರಿವಿನ ಬೆಳಕಿನತ್ತ ಅಶೋಕ ಅಂದೇ ನಡೆದ. ಜೈನಧರ್ಮ ಸಂಸ್ಥಾಪಕ ಭಗವಾನ್ ಮಹಾವೀರ ಮಹಾನಿರ್ವಾಣ ಪಡೆದದ್ದೂ ದೀಪಾವಳಿಯ ಹಬ್ಬದ ದಿನದಂದೇ. ಹೀಗೆ ಅಹಿಂಸಾತತ್ತ್ವವನ್ನು ಜಗತ್ತಿಗೆ ಸಾರುವ ಮಹಾದಿನ ಇದು! ಜೈನಮತಾವಲಂಬಿಗಳೂ ದೊಡ್ಡ ಬಗೆಯಲ್ಲಿ ದೀಪಾವಳಿಯನ್ನು ಆಚರಿಸುತ್ತಾರೆ.

## ಆಚರಣೆಯ ವಿಧಾನ

ದೀಪಾವಳಿ ಭಾರತದ ಎಲ್ಲೆಡೆಯಲ್ಲೂ ಆಚರಣೆಯಲ್ಲಿದೆ. ರೀತಿಗಳು ಬೇರೆಬೇರೆಯಾದರೂ 'ದೀಪ' ಮಾತ್ರ ಸಾರ್ವತ್ರಿಕ! ದೀಪಾವಳಿಯಲ್ಲಿಯೂ ಯಾವುದೇ ಒಂದು ನಿರ್ದಿಷ್ಟ ದೇವತೆ ಎಂಬುದಿಲ್ಲ. ದೀಪವೇ ಪ್ರಧಾನ. ದೀಪಾವಳಿ ಐದು ದಿನಗಳ ಹಬ್ಬ, ಆಶ್ವಯುಜ ಮಾಸದ ಕೃಷ್ಣ ಪಕ್ಷದ ತ್ರಯೋದಶಿಯಿಂದ ಕಾರ್ತಿಕ ಶುಕ್ಲ ಪಕ್ಷದ ಬಿದಿಗೆಯವರೆಗೆ. ತ್ರಯೋದಶಿಯ ಸಾಯಂಕಾಲ ನೀರು ತುಂಬುವ ಹಬ್ಬ. ಅಂದಿನಿಂದಲೇ ದೀಪ ಹಚ್ಚಿ ಮನೆಯ ಮುಂದೆ ಇಡುವ ಪದ್ಧತಿ ಕೆಲವು ಕಡೆ ಇದೆ. ಭಾರತೀಯರ ಹಬ್ಬಗಳಲ್ಲಿ ಮನೆಯ ಎಲ್ಲಾ ವಸ್ತುಗಳಿಗೂ ಒಂದೊಂದು ಹಬ್ಬದಲ್ಲಿ ವಿಶೇಷ ಮಾನ್ಯತೆ. ಯಾವುದೂ ನಿಕೃಷ್ಟವಲ್ಲ, ಎಲ್ಲವೂ ಉತ್ಕೃಷ್ಟ. ಜೀವನಾವಶ್ಯಕ ವಸ್ತುಗಳೆಲ್ಲ ಪೂಜಾರ್ಹ. ಅವುಗಳಿಗೆಲ್ಲ ಕೃತಜ್ಞತೆಯನ್ನು ಸಲ್ಲಿಸುವುದು ನಮ್ಮ ಕರ್ತವ್ಯ ಎನ್ನುವ ಉದಾರ ಮನೋಭಾವ ನಮ್ಮ ಪೂರ್ವಿಕರದ್ದು. ಹಾಗಾಗಿ ಸ್ನಾನದ ಮನೆಯ ಒಲೆ, ಹಂಡೆ, ಚೊಂಬುಗಳನ್ನೆಲ್ಲ ಶುಚಿ ಮಾಡಿ, ಒಲೆಗೆ ಮಂಗಳಕರವಾದ ರಂಗವಲ್ಲಿಯನ್ನಿಟ್ಟು, ಮಂಗಳದ್ರವ್ಯಗಳಿಂದ ಪೂಜಿಸಿ, ಆನಂತರ ಒಲೆಯನ್ನು ಹಚ್ಚುತ್ತಾರೆ (ಯಜ್ಞೇಶ್ವರನ ಆವಾಹನೆ). ಅಂದು ರಾತ್ರಿ ಪಾಯಸದ ಊಟ.

## ನರಕ ಚತುರ್ದಶಿ

ಬೆಳಗಿನ ಜಾವ ಚತುರ್ದಶಿ. ಮನೆಮಂದಿಗೆಲ್ಲ ಅಭ್ಯಂಜನ ಅಂದರೆ ಎಣ್ಣೆಸ್ನಾನ. ದೇವಾಲಯಗಳಲ್ಲೂ ದೇವರಿಗೆ ಎಣ್ಣೆಮಜ್ಜನ, ವಿಶೇಷ ಪೂಜೆ. ಹಿರಿಯರು ಚಿಕ್ಕವರಿಗೆ ತಲೆಗೆ ಎಣ್ಣೆಯನ್ನೊತ್ತಿ ಚಿರಂಜೀವಿಯಾಗೆಂದು ಆಶೀರ್ವದಿಸುತ್ತಾರೆ; **ಅಶ್ವತ್ಥಾಮಬಲಿರ್ವ್ಯಾಸೋ ಹನೂಮಾಂಶ್ಚ ವಿಭೀಷಣಃ । ಕೃಪಃ ಪರಶುರಾಮಶ್ಚ ಸಪ್ತೈತೇ ಚಿರಜೀವಿನ ॥** ಎಂಬ ಶ್ಲೋಕ ಹೇಳುತ್ತ ಈ ಮಹಾಪುರುಷರ ಸ್ಮರಣೆ ಮಾಡಿ ಅವರ ಆಶೀರ್ವಾದವನ್ನು ಬೇಡುತ್ತಾರೆ. ನಮ್ಮ ಹೆಮ್ಮೆಯ ಪರಂಪರೆಯನ್ನು ನಾವು ಮರೆಯಲಾದೀತೆ! ಆಧುನಿಕ ಕಾಲದಲ್ಲಿ ಹಂಡೆ, ಒಲೆಗಳು ಮಾಯವಾಗಿವೆ; ಬಾಯ್ಲರ್, ಗೀಸರ್, ಸೋಲಾರ್‌ಗಳು ಆಕ್ರಮಿಸಿಕೊಂಡಿವೆ. ಅವಕ್ಕೇ ಪೂಜೆ ಸಲ್ಲುತ್ತದೆ. **ಕಾಲಾಯ ತಸ್ಮೈ ನಮಃ** ಗಾಳಿ ಬಂದಂತೆ ತೂರಿಕೊಳ್ಳುವುದೇ ಸರಿಯಲ್ಲವೇ!

ನರಕ ಚತುರ್ದಶಿ ಎರಡನೇ ದಿನ. ದುಷ್ಟನಾದ ನರಕಾಸುರನ ಸಂಹಾರದ ಕಥೆ ಎಲ್ಲರಿಗೂ ಸಾಮಾನ್ಯವಾಗಿ ತಿಳಿದೇ ಇದೆ. ಅವನು ಭೂದೇವಿಯ ಮಗ, ರಾಕ್ಷಸ. ಉಗ್ರ ತಪಸ್ಸು ಮಾಡಿ ವೈಷ್ಣವಾಸ್ತ್ರವನ್ನು ಪಡೆದ. ಅದರ ಬಲದಿಂದ ದೇವತೆಗಳನ್ನೆಲ್ಲ ಸದೆಬಡಿದು ಸ್ವರ್ಗಲೋಕಕ್ಕೆ ಒಡೆಯನಾದ. ದೇವತೆಗಳೆಲ್ಲ ಕಾಡುಮೇಡುಗಳಲ್ಲಿ ಅವಿತುಕೊಂಡರು. ನರಕಾಸುರ ಸ್ವರ್ಗಾಧಿಪತಿ, ನಿರಂಕುಶಪ್ರಭು. ಮೊದಲೇ ಅಸುರ, ಈಗ ಇಂದ್ರಪದವಿ ಬೇರೆ! ಚೇಳಿಗೆ ಪಾರುಪತ್ಯ ಕೊಟ್ಟಂತಾಯಿತು. ಅವನ ಕಾಟ ತಾಳಲಾರದೆ ದೇವತೆಗಳು ಬ್ರಹ್ಮನನ್ನು ಮೊರೆಹೊಕ್ಕರು. ವಿಷ್ಣುವಿನ ಮೂಲಕ ಅವನ ಸಂಹಾರವಾಯಿತು. ಇಷ್ಟಾಗಿಯೂ ನರಕಾಸುರ ದೈವಭಕ್ತ. ತನ್ನ ನೆನಪು ಜನಮನದಲ್ಲಿ ಇರಬೇಕೆಂದು ಬಯಸಿ, ತನ್ನ ಸಂಹಾರವಾದ ದಿನವನ್ನು ಹಬ್ಬವನ್ನಾಗಿ ಸಂತೋಷ ಸಡಗರದಿಂದ ಆಚರಿಸಬೇಕೆಂದು ದೇವರನ್ನು ಬೇಡಿಕೊಂಡ. ಆಸುರೀಭಾವದ ನಾಶ ಸಂತೋಷದಾಯಕವಲ್ಲವೆ? ನರಕಾಸುರನ ಬೇಡಿಕೆಯಲ್ಲಿ ವಿಶೇಷವಿದೆ. 'ದೈತ್ಯನ ಕಾಲದ ಅಂಧಕಾರವಳಿದು ದೈವಜ್ಞಾನದ ಬೆಳಕು ಎಲ್ಲೆಲ್ಲೂ ಹರಡಲಿ' ಎಂಬುದೇ ಅದು.

ಅಂತೆಯೇ ನರಕಚತುರ್ದಶಿಯ ಬೆಳಗಿನ ಜಾವದ ಸ್ನಾನಕ್ಕೊಂದು ಮಹತ್ವವಿದೆ. ಅಂದು ಗಂಗಾಮಾತೆ ಕೆರೆ ಕಟ್ಟೆ, ಬಾವಿ, ನದಿ – ಎಲ್ಲ ಕಡೆ ಆವಿರ್ಭವಿಸುತ್ತೇನೆಂದು ಆಶ್ವಾಸನೆಯಿತ್ತಿದ್ದಾಳೆ. ಅಂದಿನ ಸ್ನಾನ ಪತಿತಪಾವನೆ ಗಂಗಾಸ್ನಾನ! ಸಾಮಾನ್ಯವಾಗಿ ಹಿರಿಯರು (ಗ್ರಾಮಾಂತರ ಪ್ರದೇಶದಲ್ಲಿ ಸಹ) ಒಬ್ಬರನ್ನೊಬ್ಬರು ಭೇಟಿಯಾದಾಗ "ಗಂಗಾಸ್ನಾನವಾಯಿತೇ?" ಎಂದು ಕೇಳುವುದುಂಟು. ಹೊಸಬಟ್ಟೆ ಮನೆಮಂದಿಗಷ್ಟೇ ಅಲ್ಲ, ಕೆಲಸದವರಿಗೂ. ಬೆಳಿಗ್ಗೆ ಉಡುಗೊರೆ. ಸಿಹಿ ಊಟ. ಸಾಯಂಕಾಲ ಮನೆ, ದೇವಾಲಯಗಳಲ್ಲಿ ಸಾಲುದೀಪ. ಕೆಲವರು ರಂಗವಲ್ಲಿಯನ್ನಿಟ್ಟು, ಮಧ್ಯದಲ್ಲಿ ದೀಪದ ಕಂಬವನ್ನು ಸ್ಥಾಪಿಸಿ, ಅದಕ್ಕೇ ಪೂಜೆ, ಧೂಪ, ದೀಪ, ನೈವೇದ್ಯ ಸಮರ್ಪಣೆ ಮಾಡುತ್ತಾರೆ. ಅದೇ ಅಂದಿನ ಆರಾಧ್ಯದೇವತೆ ಎನ್ನಬಹುದು. ಅಜ್ಞಾನದ ತಮಸ್ಸಿನಿಂದ ಹೊರತರುವ ಜ್ಞಾನಜ್ಯೋತಿಗಿಂತ ಮಿಗಿಲಾದ ಅದಾವ ದೇವರಿದೆ?

## ಅಮಾವಾಸ್ಯೆ –ಪಾಡ್ಯಮಿ

ಮಾರನೇ ದಿನವಾದ (ಮೂರನೇ) ಅಮಾವಾಸ್ಯೆ ಸಂಪೂರ್ಣ ಕತ್ತಲಿನ ದಿನ, ಅಂದು ಲಕ್ಷ್ಮೀಪೂಜೆ. ದುಷ್ಟನಿಗ್ರಹವಾದ ಮೇಲೆ ನೆಮ್ಮದಿ, ಶಾಂತಿ. ಇನ್ನು ಲೋಕಕಲ್ಯಾಣದ ಕಡೆ ಗಮನ, ಕರ್ತವ್ಯದತ್ತ ಮುನ್ನಡೆ. ಮನಸ್ಸಿನ ನೆಮ್ಮದಿಗಿಂತ ಬೇರೆ ಐಶ್ವರ್ಯ ಇಲ್ಲ. ಸಿರಿದೇವಿ ಲಕ್ಷ್ಮೀಪೂಜೆ, ಜ್ಯೋತಿರ್ಲಕ್ಷ್ಮಿಯ ಆರಾಧನೆ. ಕೆಲವರು ಅಂದಿನಿಂದ ತಮ್ಮ ವ್ಯಾಪಾರ ವಹಿವಾಟುಗಳನ್ನು ಆರಂಭಿಸುತ್ತಾರೆ. ಸಂಧ್ಯಾಸಮಯದಲ್ಲಿ ಲಕ್ಷ್ಮೀಪೂಜೆ.

ನಾಲ್ಕನೇ ದಿನ ಬಲಿಪಾಡ್ಯಮಿ. ತ್ಯಾಗದ ಮಹತ್ವ ಸೂಚಿಸುವ ದಿನವಿದು. 'ಸಿರಿ ಬಂದ ಕಾಲಕ್ಕೆ ಬಲು ಮೆರೆಯಬೇಡ'ವೆಂಬ ನೀತಿ ವಾಕ್ಯವಿದೆ. ಆದರೇನು, ಹಣ ಅಧಿಕಾರಗಳು ಮದವನ್ನು ಏರಿಸಿಬಿಡುತ್ತವೆ. ಬಲಿ ಚಕ್ರವರ್ತಿ ಅಸುರನಾದರೂ ದೈವಭಕ್ತ. ಚಕ್ರವರ್ತಿ ಪದವಿ ದೊರೆತ ಮೇಲೆ ಗರ್ವಿಷ್ಠನಾದ. ಇಂದ್ರಪದವಿಯನ್ನೇ ಬಯಸಿ ಯಾಗ ಮಾಡತೊಡಗಿದ. ಏರಿದ್ದು ಇಳಿಯಲೇಬೇಕು. ಬಲಿಯ ಗರ್ವವನ್ನು ಇಳಿಸಲೆಂದೇ ಭಗವಂತ ವಾಮನರೂಪದಲ್ಲಿ ಯಜ್ಞಶಾಲೆಗೆ ಬಂದ. ಕೇವಲ ಮೂರು ಹೆಜ್ಜೆ ನೆಲವನ್ನು ದಾನವಾಗಿ ಬೇಡಿದ. ಬಲಿ ಚಕ್ರವರ್ತಿಗೂ ಆ ವೇಳೆಗೆ ತನ್ನ ಅಹಂಕಾರದ ಮಟ್ಟ ಅರಿವಾಗಿತ್ತು. ಅದನ್ನು ಮಟ್ಟಹಾಕಲೆಂದೇ ಈ ವಟುವಿನ ಆಗಮನವೆಂದರಿತ. ದಾನ ಮಾಡಿ ಧನ್ಯನಾದ, ನಿಶ್ಚಿಂತನಾದ! ತ್ಯಾಗದ ಆನಂದಾನುಭವಿಯಾದ! ಭಕ್ತರ ದಾಸ ಭಗವಂತ! ಬಲಿಯ ಮನೆಯ ಬಾಗಿಲನ್ನು ಕಾಯ್ದ. "ತನಗೆ ತೆತ್ತವರಿಗೆ, ತನ್ನನ್ನೇ ತೆರುವ ಭಗವಂತ." ಹೀಗೆ ತ್ಯಾಗದ ಸಂಕೇತ ಬಲಿಪಾಡ್ಯಮಿ.